ಕೊಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಈ ಬಗ್ಗೆ ಗಮನಹರಿಸಿ ಯಾವ ಕಡೆ ನೀರಿನ ಸಮಸ್ಯೆ ತೀವ್ರವಾಗಿದೆ ಅಂಥ 20 ಪಟ್ಟಣ ಪ್ರದೇಶಗಳನ್ನು ಸರ್ಕಾರದವರಾದ ನಾವು ಆಯ್ಕೆ ಮಾಡಿಕೊಂಡು ಡ್ಯಾನಿಡಾದವರಿಗೆ ಕೊಡುತ್ತಿದ್ದೇವೆ. ಆ ಯೋಜನೆಗೆ ಡ್ಯಾನಿಡಾದವರು ಮಂಜೂರಾತಿಯನ್ನು ಕೊಡುತ್ತಾರೆ. ಈಗಾಗಲೇ ಇವರು ರೂರಲ್ ಡೆವಲಪ್‌ಮೆಂಟ್‌ಗೆ ಕೊಟ್ಟಿದ್ದಾರೆ, ಫಿಷರೀಸ್‌ಗೆ ಕೊಟ್ಟಿದ್ದಾರೆ. ಅದೇ ರೀತಿ ನಮಗೂ ಮೊದಲನೇ ಬಾರಿಗೆ ಏಡ್ ಕೊಡುತ್ತೇವೆಂದು ಡ್ಯಾನಿಡಾದವರು ಹೇಳಿರುವುದರಿಂದ ನಾವು ಈ ಯೋಜನೆಯನ್ನು ಡ್ಯಾನಿಡಾದವರಿಗೆ ಕಳುಹಿಸಿ ಜಗಳೂರಿನಲ್ಲಿ ಏನು ನೀರಿನ ತೊಂದರೆಯಾಗಿದೆ ಈಗಾಗಲೇ 72 ಲಕ್ಷ ರೂ. ಗಳನ್ನು ಅದಕ್ಕೆ ಒದಗಿಸಿ ಇದಕ್ಕಾಗಿ ಏನು ಸರ್ವೇ ಕಾರ್ಯವನ್ನು ಮಾಡಿದ್ದೇವೆ ಆ ಪ್ರಕಾರ ನಾವು ಕೆಲಸವನ್ನು ಮಾಡಿಕೊಡುತ್ತೇವೆ.

ಶ್ರೀ ಎಂ. ಬಸಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾತನಾಡಿ ಡ್ಯಾನಿಡಾ ಸಂಸ್ಥೆಯ ಮೂಲಕ ಸಂಗೇನಹಳ್ಳಿ ಸಮೀಪ ಬೋರ್‌ಗಳನ್ನು ಹಾಕಿ ನೀರನ್ನು ಒದಗಿಸುತ್ತೇವೆ ಎಂದು ಏನು ಹೇಳಿದ್ದಾರೆ ಅದು ನಿಜಕ್ಕೂ ಕೂಡ ಶಾಶ್ವತವಾದ ಪರಿಹಾರವಲ್ಲ. ಅಲ್ಲಿಯ ಸುತ್ತಮುತ್ತಲೂ ಇರತಕ್ಕಂಥ ಹಳ್ಳಿಗಳಲ್ಲಿ ಬೋರ್‌ವೆಲ್‌ಗಳು ಬೇಸಿಗೆಯಲ್ಲಿ ಫೇಲ್ಯೂರ್ ಆಗುತ್ತಿರುವುದರಿಂದ ಇದರ ಬಗ್ಗೆ ಎಕ್ಸ್‌ಪರಿಮೆಂಟ್‌ನಲ್ಲಿ ಈಗಾಗಲೇ ವಿಷಯ ತಿಳಿದಿರುವುದರಿಂದ ಅಲ್ಲಿಯ ಸುತ್ತಮುತ್ತಲೇ ಬೋರ್‌ಗಳನ್ನು ಹಾಕಿಸಿ 15 ಕಿ. ಮೀ. ದೂರದಲ್ಲಿರುವ ಜಗಳೂರಿಗೆ ನೀರನ್ನು ಒದಗಿಸಿಕೊಡುವ ಯೋಜನೆ ಸಂಪೂರ್ಣವಾಗಿ ಶಾಶ್ವತವಾಗಿ ಪರಿಹಾರವಾಗುವುದಿಲ್ಲ. ಅದಕ್ಕೂ ಮೇಲಾಗಿ ನೀವು ತುಂಗಭದ್ರಾ ನದಿಯಿಂದ ತೆಗೆದರೂ ಕೂಡ ಜಗಳೂರು ಹತ್ತಿರದಲ್ಲೇ ತುಂಗಭದ್ರಾ ಬಲದಂಡೆ ಕಾಲುವೆ ಹೋಗುತ್ತಿದೆ. ಈ ಕಾಲುವೆಯಿಂದಲಾದರೂ ಜಗಳೂರಿಗೆ ನೀರನ್ನು ಒದಗಿಸಬಹುದು ಎಂಬ ಬಗ್ಗೆ ತಾವು ಸಮೀಕ್ಷೆ ಮಾಡಿಸಿ ನೀರನ್ನು ಒದಗಿಸುವ ಸಂಬಂಧ ವಿಚಾರವನ್ನು ನಮಗೆ ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಒಳ್ಳೆಯ ಸಲಹೆ, ಆ ಬಗ್ಗೆ ಸಮೀಕ್ಷೆ ಮಾಡಿಸಿ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ.

ವಿಜಾಪುರ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನ

568 - ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಜಾಪುರ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳು ಎಷ್ಟು? ಅವುಗಳಲ್ಲಿ ಎಷ್ಟು ಮುಚ್ಚಿವೆ? ಅದಕ್ಕೆ ಕಾರಣವೇನು?*

ಆ) *ಜಿಲ್ಲೆಗೆ ಸಂಬಂಧಪಟ್ಟಂತೆ ಸಣ್ಣ ಕೈಗಾರಿಕೆಗಳಿಗೆ ಈವರೆಗೆ ಸರ್ಕಾರವು ಕೊಡಬೇಕಾಗಿರುವ ಸಹಾಯಧನ ಎಷ್ಟು?*

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ) 6540.

416.

ಒಂದೇ ತರಹದ ಕೈಗಾರಿಕೆಗಳು ಬರುತ್ತಿರುವುದರಿಂದ ಸ್ಪರ್ಧಾತ್ಮಕವಾಗಿ ನಡೆಯುವುದಿಲ್ಲ ಹಾಗೂ ಹಳೆಯ ಮೆಶಿನರಿಗಳಿಂದ ಸ್ಪರ್ಧಾತ್ಮಕ ಬೆಲೆಯಲ್ಲಿ ವಸ್ತುಗಳನ್ನು ತಯಾರು ಮಾಡುವುದಕ್ಕೆ ಆಗದೇ ಇರುವುದರಿಂದ ಮುಚ್ಚಿ ಹೋಗಿವೆ.

ಆ) ರೂ. 272.78 ಲಕ್ಷಗಳು

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳು ಎಷ್ಟಿವೆ ಎಂದು ಕೇಳಿರುವುದಕ್ಕೆ 6540 ಎಂದು ಉತ್ತರಿಸಿದ್ದಾರೆ. ಇದರಲ್ಲಿ ರೋಗಗ್ರಸ್ತ ಕೈಗಾರಿಕೆಗಳು ಬಂದ್ ಆಗಿರುವುದು 416 ಎಂದು ಹೇಳಿದ್ದೀರಿ. ಇದರಲ್ಲಿ ಕಾಯಿದೆಗನುಗುಣವಾಗಿ 416 ಸಣ್ಣ ಕೈಗಾರಿಕೆಗಳು ಬಂದ್ ಆಗಿವೆ. ಇನ್ನು ಡೀ- ಫಂಕ್ಟ್ ಆಗಿ ನಡೆಯುತ್ತಿರುವ ಯೂನಿಟ್‌ಗಳು ಬಂದ್ ಆಗಿವೆ. ಈಗ ಅದಕ್ಕೆ ತಾವು ಕಾರಣವೇನೆಂದು ಹೇಳುತ್ತೀರೆಂದರೆ ಒಂದೇ ತರಹದ ಕೈಗಾರಿಕೆಗಳು ಬರುತ್ತಿರುವುದರಿಂದ ಸ್ಪರ್ಧಾತ್ಮಕವಾಗಿ ನಡೆಯುವುದಿಲ್ಲ ಹಾಗೂ ಹಳೆಯ ಮೆಷಿನರಿಗಳಿಂದ ಸ್ಪರ್ಧಾತ್ಮಕ ಬೆಲೆಯಲ್ಲಿ ವಸ್ತುಗಳನ್ನು ತಯಾರು ಮಾಡುವುದಕ್ಕೆ ಆಗದೇ ಇರುವುದರಿಂದ ಮುಚ್ಚಿಹೋಗಿವೆ ಎಂದು ಹೇಳುತ್ತೀರಿ. ಈ ರೀತಿಯಲ್ಲಿ ಅನ್-ಹೆಲ್ತಿಯಾಗಿ ಸ್ಪರ್ಧಾತ್ಮಕ ರೀತಿಯಲ್ಲಿ ಕೈಗಾರಿಕೆಗಳು ನಡೆಯುವುದಕ್ಕೆ ಇಲಾಖೆಯಲ್ಲಿ ಯಾರು ಪರ್ಮಿಷನ್ ಕೊಟ್ಟರು? ಇದರ ಬಗ್ಗೆ ಕೂಡ ತಾವು ಹೇಳಬೇಕು. ಇದರಲ್ಲಿ 272 ಲಕ್ಷ ರೂ. ಗಳನ್ನು ಸಬ್ಸಿಡಿಯಾಗಿ ಕೊಡಬೇಕಾಗಿದೆ. ಇದನ್ನು ಯಾವಾಗಿನಿಂದ ಕೊಡಬೇಕಾಗಿದೆ? ಎಷ್ಟು ಕೊಡಬೇಕಾಗಿದೆ ಮತ್ತು ಈ ಬಾಕಿ ಉಳಿದುಕೊಂಡಿರುವುದಕ್ಕೆ ಏನು ಕಾರಣ ಎಂಬುದನ್ನು ಹೇಳಬೇಕು. ಈ ಸಬ್ಸಿಡಿಯನ್ನು ರಿಲೀಸ್ ಮಾಡದೇ ಇರುವುದರಿಂದಲೇ ಈ 416 ಯೂನಿಟ್‌ಗಳು ಬಂದ್ ಆಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಅಥವಾ ಇಲ್ಲವೇ ಎಂಬುದನ್ನು ಹೇಳಬೇಕು.

ಶ್ರೀ ಬಿ. ಎ. ಮೊಯಿದ್ದೀನ್ : ಈ ಸಬ್ಸಿಡಿ ರಿಲೀಸ್ ಮಾಡದಿರುವುದರಿಂದಲೇ ಈ ಯೂನಿಟ್‌ಗಳು ಸಿಕ್ ಆಗಿಲ್ಲ. ಈ ಕೈಗಾರಿಕೆಗಳು ಸಿಕ್ ಆಗುವುದಕ್ಕೆ ಅನೇಕ ಕಾರಣಗಳಿವೆ ಎಂಬ ಬಗ್ಗೆ ಹಿಂದೆಯೇ ಹೇಳಿದ್ದೇನೆ. ಮಾರುಕಟ್ಟೆ ವ್ಯವಸ್ಥೆ ಇರಬಹುದು, ವಿದ್ಯುತ್ ಕಡಿತ ಇರಬಹುದು ಇತ್ಯಾದಿ ಕಾರಣಗಳಿವೆ. ಈ ಕಾರಣಗಳ ಜೊತೆ ಸಬ್ಸಿಡಿ ಕೂಡ ಒಂದು ಕಾರಣ ಇರಬಹುದು. ಈ ಸಬ್ಸಿಡಿ ಬಾಕಿ ಕೇವಲ ಬಿಜಾಪುರ ಜಿಲ್ಲೆಯಲ್ಲಿ ಮಾತ್ರ ಇದೆ ಎಂದು ತಾವು ತಿಳಿದುಕೊಳ್ಳಬೇಡಿ. ಸುಮಾರು 147 ಕೋಟಿ ರೂಪಾಯಿಗಳು ಸಣ್ಣ ಕೈಗಾರಿಕೆಗಳಿಗೆ ಕೊಡತಕ್ಕಂಥ ಸಬ್ಸಿಡಿ ಅದಕ್ಕೆ ಮೊನ್ನೆ ನಾನು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಜೊತೆ ಒಂದು ಮೀಟಿಂಗ್ ಅನ್ನು ಕರೆದು ಅದಕ್ಕೆ ಒಂದು ಕಾಯಕಲ್ಪ ಮಾಡಬೇಕೆನ್ನುವ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಆ ನಿರ್ಧಾರ ಈಗ ನಿಮಗೆ ತಿಳಿಸುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಕೂಡಲೇ ಎಂದರೆ ಯಾವಾಗ ಎಂದು ನಿರ್ದಿಷ್ಟವಾಗಿ ಹೇಳಿ?

ಅಧ್ಯಕ್ಷರು : ಈಗ ಪಾಲಿಸಿ ಏನೋ ಮಾಡುತ್ತಿದ್ದಾರೆ, ಆದಷ್ಟು ಬೇಗ ತಿಳಿಸುತ್ತೇವೆ ಎಂದು ಹೇಳುತ್ತಾರೆ.

ಶ್ರೀ ಬಿ. ಎ. ಮೊಯಿದ್ದೀನ್ : ಸಭಾಧ್ಯಕ್ಷರೇ, So much money is involved. ನಮ್ಮ ಹಣಕಾಸಿನ ಲಭ್ಯತೆ ಮತ್ತು ಇದಕ್ಕೆ ಬೇರೆ ರೀತಿಯಾದಂತಹ ಒಂದು ರಿಲೀಫ್ ಅನ್ನು ನಾವು ಕಂಡು ಹಿಡಿದು, ಇದು ಈಗ ಒಂದು ಚರ್ಚೆ ಹಂತದಲ್ಲಿದೆ. ಈ ಸಂದರ್ಭದಲ್ಲಿ ನಾನು ಅದನ್ನು ಹೇಳುವುದಕ್ಕಾಗುವುದಿಲ್ಲ. ಖಂಡಿತವಾಗಿ ನಮಗೆ ಇದರ ಬಗ್ಗೆ ಕಾಳಜಿ ಇದೆ. ಕಳಕಳಿ ಇದೆ. ಇದಕ್ಕೆ ಒಂದು ಪರಿಹಾರವನ್ನು ಕಂಡು ಹಿಡಿಯುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಮೊಯ್ದೀನ್‌ರವರೇ, ಬಹಳ ಪ್ರಮುಖವಾಗಿ ಈ ಸಿಕ್ ಯೂನಿಟ್ಸ್ ರಿವೈವಲ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬಹಳ ಸಂತೋಷ. ಮೂರು ಹಂತದಲ್ಲಿ ಕೂಡ ಕಮಿಟಿಯನ್ನು ಮಾಡಿದ್ದೀರೆನ್ನುವ ಮಾತನ್ನು ಹೇಳಿದಿರಿ. ಇದು ನಿಜವಾಗಲೂ ಕೂಡ ಶ್ಲಾಘನೀಯವಾದ ವಿಷಯ. ಇದು ನಮ್ಮ ಬೇಡಿಕೆ ಮತ್ತು ಒತ್ತಾಯ ಕೂಡ ಸರ್ಕಾರದ ಮೇಲೆ ಇತ್ತು. ಆದರೆ ಈಗ ಒಂದು ವಿಚಾರವನ್ನು ತಾವು ಹೇಳಿದಿರಿ, 147 ಕೋಟಿ ರೂಪಾಯಿ ಇಡೀ ರಾಜ್ಯಾದ್ಯಂತ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕೊಡತಕ್ಕಂಥ ಹಣ ಬಾಕಿ ಇದೆ ಎಂದು. ತಾವು ಕೊಡತಕ್ಕಂಥ ಹಣವನ್ನು ತಾವು ಮೊದಲು ಕೊಟ್ಟು ನಂತರ ರಾಷ್ಟ್ರವ್ಯಾಪ್ತಿಯಾಗಿ ಚರ್ಚೆಯಾಗಬೇಕು, ಕಮಿಟಿಯಾಗಬೇಕು, ಕೇಂದ್ರಸರ್ಕಾರಕ್ಕೆ ವರದಿ ಮಾಡಬೇಕೆನ್ನುವುದು ಸರಿಯಾಗುತ್ತದೆ. ತಾವೇನು ಮೊದಲು ಕೊಡತಕ್ಕಂಥ ಹಣವನ್ನು ಇಂಡಸ್ಟ್ರೀಸ್ ಎಸ್ಟಾಬ್ಲೀಷ್ ಮಾಡಿದ ತಕ್ಷಣ ಕೊಡತಕ್ಕಂಥ ಪ್ರಯತ್ನವನ್ನು ನೀವು ಮೂಲಭೂತವಾಗಿ ಏನಾದರೂ ಮಾರ್ಪಾಟು ಮಾಡಿಕೊಂಡು ನಿಮ್ಮ ಯೋಜನೆಯಲ್ಲಿ ಅದನ್ನು ಮಾಡಿದರೆ ಕೈಗಾರಿಕೆಗಳಿಗೆ ಸಹಾಯವಾಗುತ್ತದೆ. ಎರಡನೆಯದಾಗಿ ಇವತ್ತು ನೀವು ಒಂದು ಮೇಜರ್ ಇಂಡಸ್ಟ್ರೀಸ್‌ಗೆ ಕೊಡುವಂತಹ ಸಂದರ್ಭದಲ್ಲಿ ಸಿಂಗಲ್ ವಿಂಡೋ ಏಜೆನ್ಸಿಯಲ್ಲಿ ಅದರ ಬಗ್ಗೆ ತೀರ್ಮಾನ ಮಾಡಿದ ತಕ್ಷಣ ಅದಕ್ಕೆ ಸಬ್ಸಿಡಿ ಎಷ್ಟು, ಏನು, ಎಂದೆಲ್ಲ ನೀವು ತೀರ್ಮಾನ ಮಾಡಿ ಮೊದಲೇ ಕೊಡತಕ್ಕಂಥ ಕೆಲಸ ಮಾಡುತ್ತೀರಿ. ಅದೇ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಿಂಗಲ್ ವಿಂಡೋ ಏಜೆನ್ಸಿ ಇಲ್ಲ. ಇವತ್ತು ಡಿ.ಐ.ಸಿ. ಮುಖಾಂತರ, ಡಿ.ಐ.ಸಿ.ಯಲ್ಲಿ ಸ್ವತಃ ತಮಗೆ ಅನುಭವವಾಗಿರಬಹುದು, ಒಂದು ಫಿಕ್ಸೆಡ್ ವ್ಯಾಲ್ಯೂಯೇಷನ್ ಸರ್ಟಿಫಿಕೇಟ್ ತರಬೇಕೆಂದರೆ ಇಂಡಸ್ಟ್ರೀಸ್ ಮುಚ್ಚಿ ಹೋದಮೇಲೆ. ಸರ್ಟಿಫಿಕೇಟ್ ಕೊಡುವುದಕ್ಕೆ ಸಾಧ್ಯ. ಇವತ್ತು ಇದ್ದಂತಹ ಕಾನೂನಿನಲ್ಲಿ ಇಲ್ಲದಿದ್ದರೆ ಆಗುವುದಿಲ್ಲ. ಇದಕ್ಕೆ ಏನಾದರೂ ಮೂಲಭೂತವಾಗಿ ಬದಲಾವಣೆ ಮಾಡಿದರೆ ರಾಜ್ಯಸರ್ಕಾರದ ಮಟ್ಟದಲ್ಲಿ ನೀವು ಪ್ರೋತ್ಸಾಹ ಕೊಡತಕ್ಕಂಥ ಕೆಲಸವನ್ನು ಮಾಡಿದರೆ ಸಹಾಯವಾಗುತ್ತದೆ. ಬಹಳಷ್ಟು ಕೈಗಾರಿಕೆಗಳು ರೋಗಗ್ರಸ್ಥದಿಂದ ಹೊರಗಡೆ ಬರುವುದಕ್ಕೆ ಸಾಧ್ಯ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ಎ. ಮೊಯ್ದೀನ್ : ನಾವು ಹೇಗೆ ಚಿಂತನೆ ಮಾಡುತ್ತೇವೆಂದರೆ ನೀವು ಹೇಗೆ ಇನ್‌ಕಂ ಟ್ಯಾಕ್ಸ್‌ಗೆ ಚಾರ್ಟರ್ಡ್ ಅಕೌಂಟೆಂಟ್ಸ್ ಹತ್ತಿರ ಹೋಗಿ ಹೇಗೆ ರಿಟರ್ನ್ಸ್ ಕೊಡುತ್ತಿರೋ, ಅದನ್ನು ಅವರು ಹೇಗೆ ಅಕ್ಸೆಪ್ಟ್ ಮಾಡುತ್ತಾರೋ, ಇನ್‌ಕಂ ಟ್ಯಾಕ್ಸ್ ಆಫೀಸರ್ ಅದೇ ರೀತಿ ಕೊಡಬೇಕು ಎಂದೂ ಕೂಡ ನಾನು ಈಗಾಗಲೇ ಆದೇಶವನ್ನು ನಮ್ಮ ಅಧಿಕಾರಿಗಳಿಗೆ ಕೊಟ್ಟಿದ್ದೇನೆ. that is being

worked out.ಯಾವುದೇ ಅಧಿಕಾರಿ ನಿಮಗೆ ತೊಂದರೆ ಕೊಡುವ ದೂರುಗಳು ಬಂದರೆ ತಕ್ಷಣ ನಾವು ಕ್ರಮ ಜರುಗಿಸುತ್ತೇವೆ. ಎಫ್ ಎವಿಸಿ ಒಂದು ತಿಂಗಳೊಳಗೆ ಕೊಡಬೇಕೆನ್ನುವ ಆದೇಶವನ್ನು ಈಗಾಗಲೇ ಕೊಡಲಾಗಿದೆ.

ಅಧ್ಯಕ್ಷರು : ಮಾನ್ಯ ವಿರೂಪಾಕ್ಷಪ್ಪನವರೇ ತಮ್ಮ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ. ಅದನ್ನು ಮುಂದೆ ತೆಗೆದುಕೊಳ್ಳೋಣ.

ಶ್ರೀ ಕೆ. ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೇ, ಈ ಅಧಿವೇಶನದೊಳಗೆ ಉತ್ತರ ನನಗೆ ಸಿಗಬಹುದೋ ?

ಅಧ್ಯಕ್ಷರು : ತರಿಸಿಕೊಡುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ವಿಶ್ವಯೋಜನೆಯ ಪ್ರಗತಿ

570 - ಶ್ರೀ ಎಂ. ಶಿವಾನಂದ (ಚಿಕ್ಕಬಳ್ಳಾಪುರ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ 'ವಿಶ್ವ' ಯೋಜನೆಯಡಿ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ? ಮತ್ತು ಖರ್ಚಾಗಿರುವ ಹಣವೆಷ್ಟು ?

ಆ) ಸದರಿ ಫಲಾನುಭವಿಗಳ ಸಂಖ್ಯೆ ಎಷ್ಟು ?

ಇ) ತರಬೇತಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಅನುಸರಿಸುತ್ತಿರುವ ನಿಯಮಗಳೇನು ?

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ)

ವರ್ಷ	ಬಿಡುಗಡೆ ಮಾಡಿದ ಹಣ	ಖರ್ಚಾಗಿರುವ ಹಣ
94-95	91,500-00	80,429-00
95-96	1,27,500-00	1,14,081-00
96-97	1,00,300-00	79,070-00

ಆ)

ವರ್ಷ	ತರಬೇತಿ ಪಡೆದವರ ಸಂಖ್ಯೆ
94-95	37
95-96	55
96-97	45